ಶ್ರೀ ಕಡಿದಾಳ್ ಮಂಜಪ್ಪನವರು.—ಅದಕ್ಕಾಗಿಯೇ ಈ ಬಡ್ಜೆಟ್ಟಿನಲ್ಲಿ 20,000 ರೂಪಾಯಿಗಳನ್ನು ಏರಾನ ಲಾಗಿಟ್ಟಿದೆ.

ಶ್ರೀ ಕೆ. ಲಕ್ಕಪ್ಪನವರು.—ನೀವು ಕೊಟ್ಟಿರುವ 20,000 ರೂಪಾಯಿಗಳು ಮೊದಲ್ ಮಾಡಿಸುವುದಕ್ಕೇ ಅಥವಾ ಮಟ್ಟಿಕಾಮಗಾರಿಗೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಎರಡಕ್ಕೂ ಒಟ್ಟು.

ಶ್ರೀ ಕೆ. ಲಕ್ಕಪ್ಪನವರು.—ಈ ಕೆಲಸವನ್ನು ಶ್ರವಣ ಬೆಳಗೊಳದ ಕಡೆಯಿಂದ ಮಾಡಬೇಕೆಂದಿದೆಯೇ ಅಥವಾ ನಾಗಮಂಗಲದ ಕಡೆಯಿಂದ ಮಾಡಬೇಕೆಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗಾಗಲೇ ಪ್ರಾರಂಭವಾಗಿ 35,000 ರೂಪಾಯಿಗಳನ್ನು ಖರ್ಚು ಮಾಡಿದೆ.

—

Tanks restored in Belur, Alur and Saklespur Taluks.

Q.—74. Sri B. N. BORANNA GOWDA (Belur).—

Will the Government be pleased to state :—

(a) the number of tanks restored in Belur, Alur and Saklespur taluks during the year 1951-52 ;

(b) the number of tanks whose sluices have been repaired ;

(c) whether it has come to their notice that iron pipes are not available for repairing silted sluices ;

(d) the reason for the non-availability of these pipes in our own Bhadravati Iron Works ?

A.—Sri Kadidal MANJAPPA (Minister for Revenue and Public Works).—

(a) Sanctioned during 1951-52.

Belur Taluk	...	4
Alur Taluk	...	1
Saklespur Taluk	...	1
Total	...	6

(b) (1) Belur ... 19
(2) Alur ... 26
(3) Saklespur ... 7

(c) Yes.

(d) The Mysore Iron and Steel Works intimate that the India Government had placed heavy orders previously and they could supply for the subsequent indents only after honouring the previously booked orders.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಬೇಲೂರು, ಆಲೂರು, ಸಕಲೇಶಪುರ—ಈ ಮೂರು ತಾಲ್ಲೂಕುಗಳಿಂದ ಒಟ್ಟು 6 ಕೆರೆಗಳನ್ನು ದುರಸ್ತು ಮಾಡಿದೆಯೆಂದು ಹೇಳಿದ್ದೀರಿ. ಮೂರು ತಾಲ್ಲೂಕುಗಳಿಂದ 6 ಕೆರೆಗಳ ದುರಸ್ತಾದರೆ ಸಾಕೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಒಂದೊಂದು ತಾಲ್ಲೂಕಿಗೆ ಒಂದೊಂದು ಡಿವಿಜ್ಞ ಇಟ್ಟುಕೊಂಡು, ಡಿವಿಜನ್ನಿಗೆ ಒಂದು ಕೆರೆಯಂತೆ ದುರಸ್ತು ಮಾಡಿದರೆಂದರೆ ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಧ್ಯವಾದಷ್ಟು ಮಟ್ಟಿಗೆ ಜಾಸ್ತಿ ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಒಡೆದು ಹೋಗಿರುವ ಕೆರೆಗಳ ಕೋಡಿ ನಿರ್ಮಾಡಿಸಿರುವುದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್ ಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಒಡೆದು ಹೋದ ಕೆರೆಗಳನ್ನು ಸರಿಮಾಡುವುದಕ್ಕೆ ಕಬ್ಬಿಣದ ಪೈಪುಗಳು ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿದೆ.

ಶ್ರೀ ಬಿ ಎಚ್. ಬೋರಣ್ಣಗೌಡರು.—ಕಬ್ಬಿಣದ ಪೈಪುಗಳನ್ನು ಎಲ್ಲಿಂದ ತರಿಸಬೇಕು ?

ಶ್ರೀ ಕಡಿದಾಳ್ ಮಂಜಪ್ಪನವರು.—ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಗಾದರೆ ಕಬ್ಬಿಣದ ಪೈಪುಗಳು ಸಿಕ್ಕದಿರುವುದಕ್ಕೆ ಕಾರಣವೇನು ?

Mr. SPEAKER.—There is the answer in (d).

ಶ್ರೀ ಬಿ. ಎಚ್. ಬೋರಣ್ಣಗೌಡರು.—ಭದ್ರಾವತಿ ಕಾರ್ಖಾನೆಯವರು ಇಂಡಿಯಾ ಸರ್ಕಾರದವರೊಡನೆ ಒಪ್ಪಂದ ಮಾಡಿಕೊಂಡಿರುವುದರಿಂದ ನಮಗೆ ಸಾಲದೆ ಬಂದಿದೆಯೆಂದು ತಿಳಿಸಿದೆ ; ನಮ್ಮ ಸಂಸ್ಥಾನದ ಉಪಯೋಗಕ್ಕಾಗಿ ಬೇಕಾಗಿರುವುದನ್ನು ಸ್ಪೆಷರ್ ಆಗಿ ತಯಾರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾವು ಅರೀತಿ ಏನೂ ಮಾಡುವಹಾಗಿಲ್ಲ. ಆರ್ ಇಂಡಿಯಾ ಪೂಲ್‌ಗೆ ನಮ್ಮಲ್ಲಿ ತಯಾರಾಗುವ ಕಬ್ಬಿಣವೆಲ್ಲಾ ಹೋಗುತ್ತದೆ. ಕಂಟ್ರೋಲರ್ ಆಫ್ ಸ್ಟೀಲ್ ಎಂದು ಇದ್ದಾರೆ, ಅವರು ಹಂಚಿಕೆ ಮಾಡುತ್ತಾರೆ.

Sri G. A. THIMMAPPA GOWDA (Arkalgud).—May I know the total number of tanks in Belur taluk ?

Sri Kadidal MANJAPPA.—Notice.

ಶ್ರೀ ಬಿ. ಎಂ. ಸೀನಪ್ಪನವರು (ಕಬ್ಬಿಹೊಳೆ).—ಬೊಂಬಾಯಿನವರಿಗೆ ಎಷ್ಟು ನಿಗದಿ ಮಾಡಿದೆಯೋ ಅದಕ್ಕಿಂತಲೂ ಹೆಚ್ಚಾಗಿ ಬೊಂಬಾಯಿನವರು ಬಂದು ಭದ್ರಾವತಿಯಿಂದ ತೆಗೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—That does not arise.

ಶ್ರೀ ಕೆ. ಪ್ರಭಾಕರ್ ಅವರು (ನೆಲಮಂಗಲ ಅನುಸೂಚಿತ ಜಾತಿಗಳು).—ಕಬ್ಬಿಣದ ಪೈಪುಗಳು ಸಿಕ್ಕದೆ ತಡವಾಗಿರುವುದು ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

Sri G. A. THIMMAPPA GOWDA (Arkalgud).—Has it come to the notice of the Government that people are complaining that the Public Works Department is very slow, not working properly and so on?

Sri Kadidal MANJAPPA.—It does not arise. Sir, out of this question,

Sri M. PALANIAPPAN (Ulsoor).—What is the amount of pipes allotted to the Mysore State, Sir?

Mr. SPEAKER.—That does not arise.

Delay in Settlement of Contribution to the Bangalore Corporation.

Q.—112. **Sri B. M. SEENAPPA** (Cubbonpet).—

Will the Government be pleased to state:—

(*a*) whether it has come to their notice that the yearly contribution Rs. 15,000 to the erstwhile Civil Station Municipal Commission for maintenance of trunk roads has not yet been paid from 1947-48;

(*b*) the number of reminders that have been received from the Corporation in this behalf;

(*c*) the reason for the delay in the settlement of dues;

(*d*) whether they will now settle the entire claim?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) 3.

(*c*) The question of payment of contribution to the Corporation of Bangalore for these roads was raised by the Corporation only in February 1951; and ever since the matter is under correspondence with the Corporation.

(*d*) The claim will be examined.

ಶ್ರೀ ಬಿ. ಎಂ. ಸೀನಪ್ಪನವರು.—ಪ್ರಶ್ನೆಯ (ಬ) ಭಾಗಕ್ಕೆ, ಮೂರು ರಿಮೈಂಡರುಗಳು ಬಂದಿವೆ ಎಂದು ತಿಳಿಸಲಾಗಿದೆ ಮೂರು ಎನ್ನುವುದು ತಪ್ಪು ಏಳನೆ ರಿಮೈಂಡ್ ಕೊಟ್ಟಿದ್ದಾರೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಬಿ. ಎಂ. ಸೀನಪ್ಪನವರು.—ಹಾಗೆ ಬಂದ ತಾರೀಕುಗಳನ್ನು ಹೇಳಿದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಮೇಲೆ ಗಮನಕ್ಕೆ ತರಬಹುದು. ಆದರೆ ನಮಗೆ ಬಂದಿರತಕ್ಕ ವರದಿಯ ಪ್ರಕಾರ ಮೂರು ಸಲ ಬಂದಿದೆಯೆಂದು ವ್ಯಕ್ತವಾಗುತ್ತದೆ.

ಶ್ರೀ ಬಿ. ಎಂ. ಸೀನಪ್ಪನವರು.—ಸಾಧ್ಯವಾದಷ್ಟು ಜಾಗ್ರತೆ ಈ ಬಜೆಟ್ ವರ್ಷದೊಳಗೆ ಪಾವತಿ ಮಾಡುವುದಕ್ಕೆ ಪ್ರಯತ್ನಪಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಪರೀಕ್ಷೆ ಮಾಡುತ್ತೇವೆ.

Sri R. ANANTARAMAN (Chamarajapet)—Was there no agreement at the time of Retrocession that the *status quo* must be maintained?

Sri Kadidal MANJAPPA.—No such agreement.

Sri ANANTARAMAN.—How many years' arrears are due to the Corporation?

Sri Kadidal MANJAPPA.—Whether we should pay is the question.

Mr. SPEAKER.—It is stated that it is being examined.

Famine Relief Works.

Q.—120. **Sri M. LINGANNA** (Nanjangud).—

Will the Government be pleased to state:—

(*a*) the number of districts in the State which have been subject to famine;

(*b*) the number of taluks in such districts which have been most affected;

(*c*) the steps they have taken by way of relief?

A.—**Sri Kadidal MANJAPPA** (Minister for Revenue and Public Works).—

(*a*) No district in the State has been declared as a famine stricken area under the Famine Code. However, certain areas of several districts have been considered as affected on account of adverse seasonal conditions.

(*b*) 1. Kolar ... All taluks.
2. Tumkur ... Koratagere, Sira, Gubbi, Pavagada, Madhugiri and Tumkur taluks.